# ಬಲಾತ್ಕಾರದ ಇಂಗ್ಲೀಷ್: ಪ್ರಚ್ಛನ್ನ ಭ್ರಷ್ಟಾಚಾರ ಕುರಿತು ಒಂದು ಅಧ್ಯಯನ

## (ಕುವೆಂಪು ಮತ್ತು ತೇಜಸ್ವಿ ಬರಹಗಳೊಂದಿಗೆ ಇತರ ಭಾಷಿಕ ವಿಚಾರಗಳು)

ಡಿ.ಪುರುಷೋತ್ತಮ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ಧಾರ್ಥನಗರ, ಮೈಸೂರು.

ಎಲ್ಲವನ್ನು ಕನ್ನಡದಲ್ಲಿ ಕಾಣುವ, ಹುಡುಕುವ, ಭಾಷಿಕವಾಗಿ ಅದನ್ನು ನಿರ್ಮಿಸುವ ಹಂಬಲ ಕುವೆಂಪುವಿಗೆ. ಸಾಹಿತ್ಯ, ತತ್ವಶಾಸ್ತ್ರ, ವಿಜ್ಞಾನ, ಮನಃಶಾಸ್ತ್ರ, ತಂತ್ರಜ್ಞಾನ ಇವುಗಳಿಗೆಲ್ಲ ಸಂಬಂಧಿಸಿದ ಸಾಹಿತ್ಯ ಕನ್ನಡದಲ್ಲಿ ಇವುಗಳಿಗೆ ಸೃಷ್ಟಿಯಾಗಬೇಕು. ವಿದ್ಯಾಭ್ಯಾಸದ ಎಲ್ಲ ಶ್ರೇಣಿ ಮತ್ತು ಹಂತಗಳಲ್ಲೂ ದೇಶಭಾಷೆ ಶಿಕ್ಷಣದ ಮಾಧ್ಯಮವಾಗಿರಬೇಕು ಎಂಬುದು ಕುವೆಂಪು ಅವರ ಬಹಳ ದೊಡ್ಡ ಆಶಯವಾಗಿತ್ತು. ರಾಷ್ಟ್ರದ ಸರ್ವತೋಮುಖವಾದ ಪ್ರಗತಿ ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸ-ಇವುಗಳ ಹಿನ್ನೆಲೆಯಲ್ಲಿ ನಡೆಸಿದ ತತ್ತ್ವವಿದು. ಡಾ. ಅಮರನಾಥ ಝಾರಂಥ ಶ್ರೇಷ್ಠ ಶಿಕ್ಷಣತಜ್ಞರಿಂದ ಹಿಡಿದು ಮಹಾತ್ಮಾ ಗಾಂಧೀಜಿಯಂಥ ರಾಷ್ಟ್ರನಾಯಕರವರೆಗೆ ಎಲ್ಲರೂ ದೇಶ ಭಾಷಾ ಮಾಧ್ಯಮದ ಸಾರ್ಥಕತೆಯನ್ನು ಒತ್ತಿ ಹೇಳಿದ್ದಾರೆ. ಹಿಂದಿನ ಆಂಗ್ಲ ಸರ್ಕಾರ ನೇಮಿಸಿದ್ದ ಸ್ಯಾಡ್ಲರ್ ವಿಚಾರಣಾ ಸಮಿತಿ ಮತ್ತು ಹಾರ್ಟೋಗ್ ಸಮಿತಿಗಳೂ ಸರ್ ಚಾಲ್ಸ್‌ವುಡ್, ಸರ್ ಸಾರ್ಜಂಟ್ ಮೊದಲಾದ ವಿದೇಶಿಯ ಶಿಕ್ಷಣತಜ್ಞರೂ, ದೇಶ ಭಾಷಾ ಮಾಧ್ಯಮದಿಂದಲ್ಲದೆ ಭಾರತೀಯರ ಶಿಕ್ಷಣ ಸಫಲವಾಗದೆಂದೂ ಸಮರ್ಪಕವಾಗದೆಂದೂ ಏಕಕಂಠದಿಂದ ಸಾರಿದ್ದಾರೆ.[1]

ದೇಶ ಭಾಷೆಯಲ್ಲೇ ಶಿಕ್ಷಣ ಕೊಟ್ಟರೆ ರಾಷ್ಟ್ರದ ಪ್ರಗತಿಗೆ ಹೆಚ್ಚು ಉಪಯೋಗವಾಗುತ್ತದೆ. ಶಿಕ್ಷಣ ಮಾಧ್ಯಮವಾಗಿ ದೇಶ ಭಾಷೆ, ವ್ಯವಹಾರಿಕ ಬೆಳವಣಿಗೆಗೆ ಹಲವು ಭಾಷೆಯನ್ನು ಮುಂದೆ ವಿದ್ಯಾರ್ಥಿ ಕಲಿಯ ಬಹುದು. ಜಾಗತಿಕ ವ್ಯವಹಾರಗಳಿಗೆ ಇಂಗ್ಲೀಷ್ ಒಂದೇ ಭಾಷೆ ಸಾಲದು. ಫ್ರೆಂಚ್, ರಷ್ಯನ್, ಚೀನಾ, ಜಪಾನೀ ಹೀಗೆ ಹತ್ತಾರು ಜಾಗತಿಕ ಭಾಷೆಗಳೂ ಇವೆ. ಮಾಹಿತಿ ಪಡೆಯಲು ಇಂಗ್ಲೀಷ್, ವ್ಯವಹಾರ ಮಾಡಿ ಬದುಕಲು ಸ್ಥಳಿಯ ದೇಶ ಭಾಷೆ ಸಾಕು. ಆದರೆ ಭಾರತದಲ್ಲಿ ತ್ರಿಭಾಷಾ ಸೂತ್ರ ಜಾರಿ ಸಂಬಂಧವಾಗಿ ಕುವೆಂಪು ಅವರು ಈ ವಿಷಯವನ್ನು ಖಂಡಿಸುತ್ತಾರೆ. ಹಿಂದಿಯನ್ನಾದರೂ ಐವತ್ತು ಕೋಟಿ ಭಾರತೀಯರು ಕಲಿಯಬೇಕು ಎನ್ನುವ ವಾದದಲ್ಲಿ ಸಾಮಾಜ್ಯಶಾಹಿಯ ದಬ್ಬಾಳಿಕೆಯ ಮನೋಧರ್ಮವೊಂದನ್ನು ಬಿಟ್ಟರೆ, ಬೇರೆ ಅರ್ಥವಿಲ್ಲ. ಶೇಕಡ ಒಂದರಷ್ಟು ಜನಕ್ಕೆ ಅರ್ಧಂಬರ್ಧ ಇಂಗ್ಲೀಷ್ ಕಲಿಸಿ ಬ್ರಿಟಿಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೇ?[2] ಕಲಿಕೆಯ ದೃಷ್ಟಿಯಿಂದ ಇಂಗ್ಲಿಷ್ಗಿಂತ ಹಿಂದಿ ಹೆಚ್ಚು ಅಪಾಯಕಾರಿ. ನಾವು ಈ ವಿಷಯದಲ್ಲಿ ತಮಿಳರನ್ನು ಅನುಸರಿಸುವುದು ಸೂಕ್ತ ಎಂದು ಕುವೆಂಪು ಅವರು ಕನ್ನಡಿಗರನ್ನು ಎಚ್ಚರಿಸುತ್ತಾರೆ. ಹಿಂದಿ ಪ್ರಭುತ್ವವನ್ನು ಹೇರಿ ಯಜಮಾನಿಕೆ ನೆಲೆಯಲ್ಲಿ ದೇಶ ಭಾಷೆಗಳನ್ನು ಹತ್ಯೆಮಾಡುವ ಸಂಚು ಇವರಲ್ಲಿದೆ.

ಭಾರತವು ಒಂದು ಒಕ್ಕೂಟ ವ್ಯವಸ್ಥೆಯಾಗಿದ್ದು ಅದರಲ್ಲಿ ರಾಜ್ಯಗಳ ಸ್ವಾಯತ್ತತೆಯನ್ನು ಬಹಳ ಅಗತ್ಯವಾಗಿ ಕಾಪಾಡಬೇಕು. ನಾವು ನೆಹರು ಮುಂತಾದ ನಾಯಕರ ಮೇಲಿನ ಗೌರವದಿಂದ ಕೆಲವು ವಿಷಯಗಳನ್ನು ಸುಮ್ಮನೆ ಒಪ್ಪಿಕೊಂಡು ತಪ್ಪುಮಾಡಿದೆವೆನಿಸುತ್ತದೆ. ರಾಜ್ಯಗಳ ಸ್ವಾಯತ್ತತೆ ಅಗತ್ಯ, ಅಮೆರಿಕದ State ಗಳಿಗಿರುವಂತೆ. ಅಲ್ಲಿ ಹೊಸ ಹೊಸ ಸಂಸ್ಥಾನಗಳು ಉದ್ಭವಿಸುತ್ತಲೇ ಇವೆ. ಅವುಗಳಿಗೂ ಸ್ವಾತಂತ್ರ್ಯವಿರುತ್ತದೆ; ರಾಷ್ಟ್ರಕ್ಕೂ ಭದ್ರತೆಯಿರುತ್ತದೆ. ನಮ್ಮದು United State of India ಆಗಬೇಕೆಂಬುದೇ ನನ್ನ ದೃಢವಾದ ಅಭಿಪ್ರಾಯ.[3] ದೇಶ ಭಾಷೆಗಳನ್ನು ಉಳಿಸಿಕೊಳ್ಳಲು ಕುವೆಂಪು ಸೂಚಿಸುವ ದಾರಿ ಬಹಳ ಗಂಭೀರವಾದದ್ದು. ರಾಜ್ಯಕ್ಕೂ ಇದರಿಂದ ಹೆಚ್ಚಿನ ಲಾಭ ಸಿಗುತ್ತದೆ. ರಾಜ್ಯವೂ ಕೂಡ ತನ್ನ ನೆಲೆಯ ಕೆಲಸಕಾರ್ಯಗಳನ್ನು ಮಾಡಬಹುದು, ಅನಗತ್ಯವಾದ ಹಿಂದಿ ಹೇರಿಕೆಯನ್ನು ತಡೆಯಬಹುದು.

ಇಂತಹ ವಿಚಾರದಲ್ಲಿ ಕನ್ನಡಿಗರು ಅಭಿಮಾನಿಗಳಾಗಬೇಕು, ಕನ್ನಡದಲ್ಲಿ, ಇಂಗ್ಲೀಷ್ನಲ್ಲಿ, ಸಂಸ್ಕೃತದಲ್ಲಿ ಏನೇನಿದೆಯೊ ಅದನ್ನೆಲ್ಲ ತಿಳಿದುಕೊಂಡು, ಎಲ್ಲರನ್ನೂ ಮೀರಿ ಮುರಿದು ಹೋಗಬೇಕು. ಬೆಳೆಯ ಬೇಕು, ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಬೆಳೆಯಬೇಕು. ಕನ್ನಡಿಗರಲ್ಲಿರುವ inferiority complex ಹೋಗಿ, ಅವರಲ್ಲಿ superiority complex ಬೆಳೆಯುವಂತೆ ಮಾಡಬೇಕು.

ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿ ಕೊಳ್ಳಲು, ಸಮರ್ಥವಾಗಿ ಹೇಳಲು ಸಾಧ್ಯವಾಗುವುದಿಲ್ಲ ಎಂಬ ಹಲವರ ಹೇಳಿಕೆಗೆ ಕುವೆಂಪು ಬಹಳ ಹರಿತವಾದ ಮಾತುಗಳಿಂದ ಅವರನ್ನು ಎಚ್ಚರಿಸುತ್ತಾರೆ. ವಿಜ್ಞಾನವನ್ನೂ, ತಾಂತ್ರಿಕ ಜ್ಞಾನವನ್ನೂ ಕನ್ನಡದಲ್ಲಿ ಹೇಳಲಾಗುವುದಿಲ್ಲ ಎಂಬುದು ಮಂದಮತಿಗಳ, ಆಲಸ್ತಿ, ದುರ್ಬಲರ ಮತ್ತು ವಿದ್ಯಾದ್ರೋಹಿಗಳ ಕನವರಿಕೆ ಮತ್ತು ಅತ್ಯಂತ ಹಾಸ್ಯಾಸ್ಪದವಾದ ತಲೆಹರಟೆ ಎಂಬುದನ್ನು ನಮ್ಮ ವಿದ್ವಾಂಸರು ತಮ್ಮ ಕನ್ನಡ ವೈಜ್ಞಾನಿಕ ಮತ್ತು ಮಾನವಿಕ ಗ್ರಂಥಗಳ ಮೂಲಕ ಸಾರಿ ಹೇಳಿದ್ದಾರೆ.[4] ಕೆಲವು ಪಾರಿಭಾಷಿಕ ಪದಗಳಿಗೆ ಸಂಬಂಧಿಸಿದಂತೆ ಕುವೆಂಪು ಅವರು ನೀಡುವ ಸಲಹೆ ಬಹಳ ಉಪಯುಕ್ತವಾದ್ದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಳಕೆಯಾಗುವ ಪರಿಭಾಷೆಗಳನ್ನು ಅದೇ ರೀತಿ ಉಳಿಸಿಕೊಂಡು ಮತ್ತೆ ಕೆಲವು ಕಡೆ ತದ್ಭವ-ತತ್ಸಮಗಳನ್ನು ಸ್ವಲ್ಪ ಅಳವಡಿಸಿಕೊಂಡು ಬಳಸುವುದು ಸೂಕ್ತ ಎಂದು ಹೇಳುತ್ತಾರೆ.

ಲಕ್ಷದಲ್ಲಿ ಒಬ್ಬರಿಗೆ ಅನುಕೂಲ ಮಾಡಿಕೊಡಲು, ಲಕ್ಷಾಂತರ ಜನರನ್ನು ಇಂಗ್ಲೀಷಿನ ಬಲಿಪೀಠದ ಮೇಲೆ ವಧೆ ಮಾಡುವುದು ಸರಿಯಲ್ಲವೆಂಬುದು ಸ್ಪಷ್ಟ.[5] ಕನ್ನಡ ಭಾಷೆಯನ್ನು ಕಡೆಗಣಿಸಿ ಇಂಗ್ಲೀಷ್ನಲ್ಲಿ ಶಿಕ್ಷಣ ಕೊಡುವ ಪದ್ಧತಿಯ ಬಗ್ಗೆ ಕೂಡ ಕುವೆಂಪು ಅವರಿಗೆ ತೀವ್ರವಾದ ಅಸಮಧಾನವಿದೆ. ಲಕ್ಷದಲ್ಲಿ ಒಬ್ಬನಿಗೆ ಸಿಗುವ ಅವಕಾಶಕ್ಕೆ ಉಳಿದ ಲಕ್ಷಾಂತರ ಮಕ್ಕಳ ಭವಿಷ್ಯವನ್ನು ಸಂಸ್ಕೃತಿ ಹೀನವಾದ ಸ್ಥಿತಿಗೆ ತರುವುದು ಸರಿಯಲ್ಲ. ಒಬ್ಬ ಪ್ರತಿಭಾವಂತನ ಸೃಷ್ಟಿಗಾಗಿ ಇಷ್ಟು ಮಕ್ಕಳ ಭವಿಷ್ಯವನ್ನು ತ್ರಿಶಂಕು ಸ್ಥಿತಿಗೆ ತಳ್ಳುವುದು ಎಷ್ಟು ಸರಿ? ಇಂದಿನ ಸ್ಥಿತಿ ಇನ್ನೂ ಶೋಚನಿಯವಾಗಿದೆ. ಕನ್ನಡದ ಮಾಧ್ಯಮ ಶಾಲೆಗಳು ನಾಡಿನ ಒಳಗೂ ಹೊರಗೂ ಮುಚ್ಚುತ್ತ ಬರುತ್ತಿವೆ. ಕೇಂದ್ರದ ಆರ್.ಟಿ.ಇ ಕಾಯ್ದೆ ಕೂಡ ದೇಶ ಭಾಷಾ ನಿಯಮಕ್ಕೆ ಮಾರಕವಾದ ಕಾಯ್ದೆಯಾಗಿದ್ದು ರಾಜ್ಯ ಸರ್ಕಾರ ಇದನ್ನು ಜಾರಿ ಮಾಡುವುದರ ಮೂಲಕ ಕನ್ನಡದ ಹತ್ಯೆ ಮಾಡುವುದರ ಜೊತೆಗೆ ಸಂಸ್ಕೃತಿ ಹೀನವಾದ ಭವಿಷ್ಯ ನಿರ್ಮಿಸುಸುತ್ತ, ಹೊಸ ಸಂದಿಗ್ಧತೆಯನ್ನು ತಂದೊಡ್ಡಿದೆ.

ದೇಜಗೌ ಅವರೊಂದಿಗೆ ಸಂದರ್ಶನದಲ್ಲಿ ಕುವೆಂಪು ಅವರು ಹೇಳುವ ಮಾತು ಬಹಳ ಗಂಭೀರವಾದ್ದು. ಸಂದರ್ಶಕ: ಕನ್ನಡ ಸರ್ವ ಮಾಧ್ಯಮವಾಗುವ ತನಕ ಸಾಹಿತ್ಯೇತರ ಕ್ಷೇತ್ರದಲ್ಲಿ ಉತ್ತಮ ಕೃತಿಗಳ ಸೃಷ್ಟಿ ಸಾಧ್ಯವಾಗಲಾರದಲ್ಲವೆ? ಕುವೆಂಪು: ನಿಮ್ಮ ಮಾತು ನೂರಕ್ಕೆ ನೂರು ಪಾಲು ಸತ್ಯ. ಕನ್ನಡ ಸರ್ವಮಾಧ್ಯಮವಾದಾಗ ಪರಾನುಕರಣೆ ಹಿಂಜರಿಯುತ್ತದೆ; ಸ್ವತಂತ್ರಾಲೋಚನೆ ಸುಲಭವಾಗುತ್ತದೆ; ಪ್ರತಿಭೆ ವಿಕಾಸಗೊಳ್ಳುತ್ತದೆ; ಸ್ವೋಪಜ್ಞತೆಗೆ ರೆಕ್ಕೆ ಮೂಡುತ್ತದೆ. ಲೋಕೋಪಯೋಗಿ ಸಾಹಿತ್ಯದ ಬೆಳವಣಿಗೆ ಶುದ್ಧ ಸಾಹಿತ್ಯದ ಹಾಗೂ ಭಾಷೆಯ ಬೆಳವಣಿಗೆಯ ಮೇಲೆ ಅಪಾರ ಪ್ರಭಾವ ಬೀರುತ್ತದೆ.[6]

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಪ್ರೊಫೆಸರ್ ನಿಕ್ಕಂ ಅವರಿಗೆ ಕುವೆಂಪು ಹೇಳಿದ ಮಾತು ನೀವು ಕನ್ನಡದಲ್ಲಿ ಪುಸ್ತಕ ಬರೆಯಿರಿ. ಇಂಗ್ಲೀಷ್ನಲ್ಲಿ ಬರೆದರೆ 'ಸಮುದ್ರಕ್ಕೆ ಒಂದು ಕೊಡ ನೀರು ಹೊತ್ತಂತೆ' ಕನ್ನಡದಲ್ಲಿ ಬರೆಯುವ ಅಗತ್ಯ ಹೆಚ್ಚು' ಎಂದು ಹೇಳಿದ್ದರು.[7] ಇಂದಿನ ಶಾಲೆಯ ಶಿಕ್ಷಣ, ಯಂತ್ರಜ್ಞಾನ, ವಿಜ್ಞಾನ ಇವುಗಳಿಗೆ ನಮ್ಮ ದೇಶದ ಸಂಶೋಧಕರು ಮಾಡುತ್ತಿರುವ ಕೆಲಸವೇ ಇದು. ಸ್ವದೇಶಿ ಅನ್ವೇಷಣೆಗಳು ನಮ್ಮಲ್ಲಿ ಮೂಡದೇ ಇರುವುದಕ್ಕೆ ಇವು ಕೂಡ ಕಾರಣವಾಗಿದೆ.

ಕುವೆಂಪು ಅವರು ಕುಲಪತಿಯಾಗಿದ್ದಾಗ ಅವರೊಮ್ಮೆ ಸಿಂಡಿಕೇಟ್ ಸಭೆಯಲ್ಲಿ ಹೇಳಿದಂತೆ: ಕನ್ನಡ ಮಾಧ್ಯಮದ ಪ್ರಶ್ನೆ ಬಂದಾಗ ನಾನು ಟ್ಯಾಂಕರ್ನಂತೆ ಮುನ್ನುಗ್ಗುತ್ತೇನೆ, ನೀವು ದಾರಿಬಿಟ್ಟು ಕೊಟ್ಟರೆ ಸರಿ, ಇಲ್ಲವೋ ಅಪ್ಪಚ್ಚಿಯಾಗುತ್ತೀರಿ! ಯಾವ ಉಪಾಧಿಯನ್ನಾದರೂ ಅವರು ಬಿಟ್ಟಾರು, ಕನ್ನಡ ಉಪಾಧಿ ಅವರನ್ನು ಬಿಡದು.[8]

ಕುವೆಂಪು ಆದಿಯಾಗಿ ಇಂದಿನ ತಲೆಮಾರಿನ ದೇವನೂರು ಮಹಾದೇವ ಸೇರಿದಂತೆ ಅನೇಕ ಜನ ಚಿಂತಕರು, ಸಾಹಿತಿಗಳು ಕನ್ನಡ ಭಾಷಾ ನೀತಿಗೆ ಸಂಬಂಧಿಸಿದಂತೆ ಅನೇಕ ಹೋರಾಟಗಳನ್ನು ನಡೆಸಿಕೊಂಡು ಬಂದಿದ್ದಾರೆ. ಸಾಹಿತ್ಯದ ಗೋಷ್ಠಿಗಳಿಂದ ಹಿಡಿದು ರಸ್ತೆಗಿಳಿದು ಅನೇಕ ಹೋರಾಟ ಚಳುವಳಿಗಳು ನಡೆಯುತ್ತಿವೆ. ಅಷ್ಟಾದರೂ ಕನ್ನಡ ಭಾಷೆಗೆ ಕರ್ನಾಟಕದಲ್ಲೇ ಅನ್ಯಾಯವಾಗುತ್ತಿದೆ. ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು; ಶಿಕ್ಷಣದ ಎಲ್ಲ ಘಟ್ಟಗಳಲ್ಲಿಯೂ ಅದು ಶಿಕ್ಷಣ ಮಾಧ್ಯಮವಾಗಬೇಕು. ಈ ಎರಡು ಸಂಕಲ್ಪಗಳು ಕೈಗೂಡಿದರೆ ಉಳಿದೆಲ್ಲ ಕೇಡುಗಳೂ ಮಾಯವಾಗುತ್ತವೆ. ಎಂಬ ಮಾತು ನಿಜ. ಆದರೆ, ಇಷ್ಟು ದಿನಗಳು ಕಳೆದರೂ ಈ ಕಾರ್ಯ ನಡೆಯದೇ ಇರುವುದು ಅನೇಕ ಸಮಸ್ಯೆಗಳಿಗೆ ನಾಂದಿಯಾಗಿದೆ. ರೋಗವಾಸಿಯಾದ ನಂತರವೂ ಮಾತ್ರೆ ಸೇವನೆ ಮಾಡಿದರೆ ಆಗುವ ದುಷ್ಪರಿಣಾಮದಂತೆ ಈ ಇಂಗ್ಲೀಷ್ ಭಾಷಾ ಶಿಕ್ಷಣದ ಅನಗತ್ಯ ಕಲಿಕೆಯ ಒತ್ತಡದಿಂದಾಗಿ ಮಕ್ಕಳೆಲ್ಲರೂ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಎದುರಾಗುತ್ತಿದ್ದಾರೆ.

**ಭಾಷೆ ಮತ್ತು ಶಿಕ್ಷಣ: ತೇಜಸ್ವಿ ಅವರ ಕಾಲದಿಂದ ಈಚೆಗೆ**

ತೇಜಸ್ವಿ ಇಂತಹ ವಿಚಾರದಲ್ಲೂ ಸ್ಪಷ್ಟವಾದ ನಿಲುವಿನೊಂದಿಗೆ ಬಹಳ ನಿಷ್ಠುರವಾದ ದನಿಯಲ್ಲಿ ರಾಜಕಾರಣಿಗಳನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಾರೆ. ಕನ್ನಡ ಮಾಧ್ಯಮ ಶಾಲೆಯ ಮಕ್ಕಳ ಸ್ಥಿತಿ ಮತ್ತು ನಗರದ ಇಂಗ್ಲಿಷ್ ಶಾಲೆಗಳ ನಡುವಿನ ಅಂತರ ಮತ್ತು ಮಕ್ಕಳ ಪೋಷಕರ ಮನಸ್ಥಿತಿಯನ್ನು ಅವಲೋಕಿಸಿ ಅವರ ಪತ್ರಿಕಾ ಲೇಖನದಲ್ಲಿ

ಚರ್ಚಿಸುತ್ತಾರೆ. ಅವರ ಪ್ರಮುಖವಾದ ಲೇಖನಗಳು ಹೀಗಿವೆ. 'ಕನ್ನಡ ಕೆಂಡದ ಜೊತೆ ಆಟ', 'ಈ ಗೊಂದಲಗಳೆಲ್ಲ ಕೊನೆಗೊಳ್ಳುವುದೆಂದು?', ಇಂಗ್ಲಿಷ್ ಮೀಡಿಯಂ - ಕನ್ನಡಕ್ಕೆ ಕುತ್ತು?,

'ಕನ್ನಡ ಉಳಿಸಿ, ಇಂಗ್ಲೀಷ್ ಕಲಿಸಿ ಚಳವಳಿ ಮಾಡಿದ್ರೆ', `ಇಂಗ್ಲಿಷ್ ಕಲಿಸೋದಂದ್ರೆ ಸುಲಭ ಅಲ್ಲ;', 'ಸೂಪರ್ ಪವರ್ ಆಗಲು ಕನ್ನಡವೇ ಗತಿ', 'ಕನ್ನಡ ಕೊಲ್ಲುವ ತಂಡ?', 'ಇನ್ನಾದರೂ ನಿಲ್ಲಿಸಿ ವಿಶ್ವಕನ್ನಡ ಮೇಳ', ಹೀಗೆ ಹಲವಾರು ಲೇಖನಗಳು ಕನ್ನಡದ ವಾಸ್ತವದ ಸ್ಥಿತಿ, ಅಳಿವು ಉಳಿವಿನ ಬಗ್ಗೆ, ಭವಿಷ್ಯದ ಬಗ್ಗೆ ಎಚ್ಚರಿಸುವ ದಾರಿ ತೋರುವಂತಿದೆ. ಒಟ್ಟು ನೂರು ವರ್ಷಗಳ ಕನ್ನಡ ಪರವಾದ ಚಿಂತನೆಗಳ ಲಹರಿ, ಅದು ಪಡೆದುಕೊಂಡ ಸ್ವರೂಪ ಮತ್ತು ಕಾಲದ ಒತ್ತಡಗಳನ್ನು ಇವರ ಚಿಂತನೆಯಲ್ಲಿ ಒಟ್ಟಾಗಿಸಿಕೊಂಡು ನೋಡುತ್ತ ಮುಂದಿನ ದಾರಿಯನ್ನು ನಿರ್ಮಿಸಿಕೊಳ್ಳುವ ಅಗತ್ಯವಿದೆ.

2500 ಸಾವಿರ ವರ್ಷದ ಇತಿಹಾಸ ಇರುವ ನಮ್ಮ ಹೆಮ್ಮೆಯ ಭಾಷೆಯ ಕುರಿತು, ಭವ್ಯವಾದ ಪರಂಪರೆಯ ಇತಿಹಾಸವನ್ನು ಕುರಿತು ಅವಲೋಕಿಸುವ ಭಾವುಕ ಪ್ರಪಂಚದಿಂದ ಹೊರಗಿನ ವಾಸ್ತವ ಇನ್ನೂ ಇನ್ನೂ ಕರಾಳವಾಗಿದೆ. ಕನ್ನಡ ಭಾಷೆ ಎಲ್ಲಾ ಕಾಲದಲ್ಲೂ ಇಂತಹ ಸಂದಿಗ್ಧತೆಗಳನ್ನು ಅನುಭವಿಸಿಕೊಂಡು ಬಂದಿದೆ. ಕನ್ನಡ ಭಾಷೆ ಯಾವ ಕಾಲದಲ್ಲೂ ಜನ ಸಾಮಾನ್ಯನ ನಾಲಿಗೆಯಿಂದ ದೂರ ಉಳಿದಿರಲಿಲ್ಲ. ಎಂತಹ ಆಕ್ರಮಣಗಳು ನಡೆದಾಗಲೂ ಭಾಷೆಗೆ ಯಾವ ಕುಂದೂ ಇರಲಿಲ್ಲ. ಆದರೆ ಇಂದು ಪರಿಸ್ಥಿತಿ ಬೇರೆಯಾಗಿದೆ. ಭಾಷಿಕನೇ ಭಾಷೆಯ ಬಳಕೆಯಿಂದ ದೂರವಾಗುತ್ತ, ಅನ್ಯ ಪ್ರಭಾವ ಮತ್ತು ಅನುಕರಣೆಗೆ ಒಳಗಾದ ಸ್ಥಿತಿಯಲ್ಲಿ ಕನ್ನಡ ಭಾಷೆ ಮತ್ತು ಕರ್ನಾಟಕದ ಅಸ್ತಿತ್ವ ನಿಂತಿದೆ. ಜಾಗತಿಕ ಪ್ರಭಾವದಿಂದ ನಿತ್ಯ ವಲಸೆ ಬರುತ್ತಿರುವ ಅನ್ಯ ಭಾಷಿಕರು, ಬಂಡವಾಳಶಾಹಿಗಳು, ಉದ್ಯೋಗಾಕಾಂಕ್ಷಿಗಳಿಂದ ನಿರ್ಮಿತ ಹಲವಾರು ಹೊಸ ಸಮಸ್ಯೆಗಳ ಜೊತೆಗೆ ಬರೇ ಉತ್ಪಾದನೆಯ ಘಟಕಗಳಾಗಿ ತಲೆ ಎತ್ತಿ ನಿಂತಿರುವ ಶಿಕ್ಷಣ ಸಂಸ್ಥೆಗಳು, ವಿತ್ತ ಸಂಪಾದನೆಯ ಬೇಡಿಕೆಗೆ ತಕ್ಕಂತೆ ಶಿಕ್ಷಣವನ್ನು ನೀಡುತ್ತ, ರೂಪಿಸುತ್ತ ಇರುವ ತಜ್ಞರು. ಹೀಗೆ ಶೋಚನೀಯವಾದ ಸ್ಥಿತಿಯಲ್ಲಿ ಇಂದಿನ ಮಕ್ಕಳು, ಪೋಷಕರು, ಹೋರಾಟಗಾರರು, ಸಾಹಿತಿಗಳು ಪರಸ್ಪರ ದ್ವಂದ್ವ ಮನಸ್ಥಿತಿಯಲ್ಲಿ ಉಳಿದು ಬಿಟ್ಟಿದ್ದಾರೆ. ತೇಜಸ್ವಿಯವರ ಕನ್ನಡ ಶಿಕ್ಷಣ ಕುರಿತಾದ ಚಿಂತನೆಗಳನ್ನು ಕೆಲ ಅಂಶಗಳಿಂದ ವರ್ಗೀಕರಿಸಿಕೊಂಡು ನೋಡಬಹುದು.

1. ಕನ್ನಡ ಶಾಲೆಗಳ ಸ್ಥಿತಿ-ಗತಿ,
2. ಪೋಷಕರ ನಿಲುವು,
3. ವಾಸ್ತವದ ಗೊಂದಲಗಳೋ ಅಥವಾ ಸಮಸ್ಯೆಗಳೋ?
4. ಆಧುನಿಕತೆಗೆ ಕನ್ನಡವನ್ನು ಸಜ್ಜಾಗಿಸಬೇಕಾದ ನೆಲೆಗಳು

**1. ಕನ್ನಡ ಶಾಲೆಗಳ ಸ್ಥಿತಿ-ಗತಿ:**

ಯಾವ ನೆಲೆಯಿಂದಲೂ ಖಾಸಗಿ ಇಂಗ್ಲೀಷ್ ಶಾಲೆಯ ಮಟ್ಟಕ್ಕೆ ಕನ್ನಡ ಶಾಲೆಗಳು ಇಲ್ಲದಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಮೂಲಭೂತವಾದ ವ್ಯವಸ್ಥೆ, ಶಿಕ್ಷಕರ ಕೊರತೆ, ಶಿಸ್ತು, ಹೀಗೆ ಹೇಳು ಬಹುದಾದ ಕೊರತೆಗಳ ನಡುವೆ ಕನ್ನಡ ಶಾಲೆಗಳು ನರಳುತ್ತಿವೆ. ಖಾಸಗಿ ಶಾಲೆಗಳು ಕಟ್ಟಡ ಕಾಮಗಾರಿಯಿಂದ ಹಿಡಿದು ಶಿಕ್ಷಕರ ತನಕ ಗುಣಮಟ್ಟವನ್ನು

ಕಾಯ್ದುಕೊಳ್ಳುತ್ತಾರೆ. ಆದರೆ ಸರ್ಕಾರಿ ಮತ್ತು ಕನ್ನಡ ಶಾಲೆಗಳು ಸೋರುವ ಸೂರು, ಬೆಂಚು, ಕುರ್ಚಿಗಳು ಇಲ್ಲದ ಸ್ಥಿತಿ, ಬರೆಯಲು ಸಾಧ್ಯವಾಗದ ಬೋರ್ಡು. ಇವೆಲ್ಲ ಸುಧಾರಿಸಬಹುದಾದರೂ, ಇಚ್ಛಾಶಕ್ತಿಯ ಕೊರತೆ ಇರುವ ಅಧಿಕಾರಿ ವರ್ಗ ಮತ್ತು ರಾಜಕಾರಣಿಗಳು ಜಾಗೃತರಾದರೆ ಇದು ತೀರುವ ಸಮಸ್ಯೆಯಾಗಿದೆ. ಆದರೆ ಕಲಿಕೆಯ ಸ್ಥಿತಿ ಮತ್ತೊಂದು ರೀತಿಯದು.

ಕನ್ನಡ ಮಾಧ್ಯಮದ ಉತ್ತಮ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ವಿಷಯಗಳನ್ನು ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ತಿಳಿದಿರುತ್ತಾರಾದರೂ ಇಂಗ್ಲೀಷ್ ಭಾಷೆಯನ್ನು ಉಪಯೋಗಿಸುವ ಮತ್ತು ಅರ್ಥಮಾಡಿಕೊಳ್ಳುವ ವಿಷಯದಲ್ಲಿ ಅವರು ಇಂಗ್ಲೀಷ್ ಸ್ಕೂಲ್ಗಳಿಂದ ಬಂದ ವಿದ್ಯಾರ್ಥಿಗಳಿಗಿಂತ ಹಿಂದುಳಿದಿರುತ್ತಾರೆಂಬುದು ನಿಜ......... ನಮಗೀಗ ಹೇಗಾದರೂ ಮಾಡಿ ಈ ಎರಡು ಭಾಷಾ ಮಾಧ್ಯಮಗಳ ದೆಸೆಯಿಂದ ರೂಪುಗೊಂಡಿರುವ ಹೊಸ ಜಾತಿ ಪದ್ಧತಿಯನ್ನು ನೀಗಬೇಕಾಗಿದೆ..........ಇವತ್ತು ಇಂಗ್ಲೀಷ್ ಮಾಧ್ಯಮ ಚಿಗುರುತ್ತಿರುವುದು ಈ ಜಾತಿ ಪದ್ಧತಿಯಿಂದಲೇ ಹೊರತು ಇಂಗ್ಲೀಷಿನ ಅಥವಾ ಜ್ಞಾನದ ಬಗ್ಗೆಯ ಹಂಬಲದಿಂದಲ್ಲ.[9] ಕನ್ನಡದ ಇಂತಹ ಸ್ಥಿತಿಗೆ ಇಂಗ್ಲೀಷ್ ಮಾಧ್ಯಮ ನೇರವಾದ ಕಾರಣವಾದರೂ ಅಂತಹ ವ್ಯವಸ್ಥೆಯ ನಿರ್ಮಾಣಕ್ಕೆ ಎಲ್ಲರೂ ಕಾರಣರಾಗಿದ್ದಾರೆ. ಹೆಚ್ಚಿನ ಸರ್ಕಾರಿ ಶಾಲೆಗಳು ಗೊಬ್ಬರದ ಗುಂಡಿಗಳಾಗಿವೆ. ವಾತಾವರಣ ಭಯಾನಕವಾಗಿವೆ. ಸರಿಯಾದ ಮೇಷ್ಟ್ರಿಲ್ಲ, ಇನ್ನು ಮೇಷ್ಟ್ರಗಳ ತೊಂದರೆ ನೋಡಿ. ಚುನಾವಣೆಗಳು ಬಂದಾಗ ಅವರೇ ಕೋಳಿ, ದನ, ಜನ ಅಂತ ಸರ್ವೆ ಮಾಡುವುದಕ್ಕೆ ತಿರುಗಬೇಕು. ಎಲ್ಲಾ ಹೊರೆ ಮೇಷ್ಟ್ರ ಮೇಲೆ ಹಾಕಿದ್ರೆ ಅವನಿಗೇನು ಉತ್ಸಾಹ ಇರುತ್ತೆ? ಇದರಿಂದಾಗಿ ಆತ ಸರಿಯಾದ ಪಾಠ ಹೇಳುವಲ್ಲಿ ವಿಫಲನಾಗ್ತಾನೆ. ಇದಕ್ಕೆಲ್ಲಾ ಸರ್ಕಾರವೇ ಹೊಣೆಯಾಗಿದೆ[10] ಈಗ ಇರುವ ಶಾಲೆಗಳಲ್ಲಿ ಭಿನ್ನವಾದ ವ್ಯವಸ್ಥೆಗಳು, ಆಡಳಿತ ಕೇಂದ್ರದ ನೂರಾರು ಹೊಸ ನಿಯಮ ಮತ್ತು ಬೋಧನಾ ವಿಧಾನಗಳು ಮಕ್ಕಳಿಗೆ ಕಲಿಕೆಗಿಂತ ಕಾಲಹರಣವೇ ಹೆಚ್ಚಾಗಿದೆ. ಇರುವ ಸರ್ಕಾರಿ ಶಾಲೆಗಳು ಬೇರೆ ಬೇರೆ ನಿಯಂತ್ರಣದಲ್ಲಿ ಸಿಲುಕಿವೆ. ಸೆಂಟ್ರಲ್ ಸ್ಕೂಲ್, ಮೊರಾಜರ್ ಸ್ಕೂಲ್, ಮಂಡಲ ಪಂಚಾಯಿತಿ ಸ್ಕೂಲ್, ಸರ್ಕಾರಿ ಪಾಲಿಕೆ ಶಾಲೆ, ಸರ್ಕಾರಿ ಅನುದಾನಿತ ಶಾಲೆ, ಖಾಸಗಿ ಶಾಲೆ ಹೀಗೆ ಬೇರೆ ಬೇರೆಯಾದ ನಿಯಮ ಮತ್ತು ನಿಯಂತ್ರಣದ ಶಿಕ್ಷಣ ನೀತಿಯೊಂದಿಗೆ ಒಂದೇ ರಾಜ್ಯದ ಒಳಗಿನ ಕಾರ್ಯನಿರ್ವಹಿಸುತ್ತಿವೆ. ಇಂತಹ ನೆಲೆಯಿಂದ ವಿದ್ಯಾಭ್ಯಾಸ ಪಡೆದ ಹಿಂದುಳಿದ, ಅಲ್ಪಸಂಖ್ಯಾತ, ದಲಿತ ಮಕ್ಕಳು ನಗರದ ಇಂಗ್ಲೀಷ್ ಶಾಲೆಯ ಮಕ್ಕಳ ಜೊತೆ ಸ್ಪರ್ಧಿಸಬೇಕು. ಇದು ಮಾಧ್ಯಮಗಳಿಂದ ಉಂಟಾಗಿರುವ ಅಂತರ. ಇದಕ್ಕೆ ಪರಿಹಾರ ಹೇಗೆ ಸಾಧ್ಯ? ಕರ್ನಾಟಕದಲ್ಲೇ ಕನ್ನಡ ಭಾಷೆ ಕಲಿಕೆಯ ಭಾಷೆಯಾಗದೇ ಹೋದರೆ ಮತ್ತೆ ಯಾರು ಕನ್ನಡ ಕಲಿಯುತ್ತಾರೆ? ಸರ್ಕಾರಿ ನೌಕರಿ ಬೇಕು, ಸರ್ಕಾರಿ ದಿಂದ ಹಣಕಾಸಿನ ನೆರವು ಬೇಕು, ಸರ್ಕಾರದಿಂದ ಎಲ್ಲಾ ರೀತಿಯ ಸವಲತ್ತುಗಳು ಬೇಕು. ಆದರೆ ಜನಕ್ಕೆ ಸರ್ಕಾರ ನೀಡುವ ಕನ್ನಡ ಶಿಕ್ಷಣ ಬೇಡವಾಗಿದೆ. ಕನ್ನಡ ಭಾಷೆಯ ಕಲಿಕೆಯ ಬಗ್ಗೆ ನಿರಾಕರಣೆ ಮಾಡುವ ಮಟ್ಟಕ್ಕೆ ವ್ಯವಸ್ಥೆಯನ್ನು ಬಂಡವಾಳಶಾಹಿ ವ್ಯವಸ್ಥೆ ತನ್ನ ಅಗತ್ಯಕ್ಕೆ ತಕ್ಕಂತೆ ರೂಪಿಸಿದೆ. ಅದಕ್ಕೆ ಪೋಷಕವಾಗಿ ರಾಜಕೀಯ ವ್ಯವಸ್ಥೆ, ಆಡಳಿತ ವ್ಯವಸ್ಥೆ ಮತ್ತು ಜನಸಾಮಾನ್ಯರೂ ಜೊತೆಗಿದ್ದಾರೆ. ಕುವೆಂಪು ಅವರ ಕಾಲಕ್ಕೂ, ತೇಜಸ್ವಿಯವರ ಕಾಲಕ್ಕೂ, ಇಂದಿನ ಕನ್ನಡದ ಸ್ಥಿತಿ ಪಾತಾಳದ ತಳಮುಟ್ಟುತ್ತಿದೆ. ಹೀಗೇ ಮುಂದುವರಿದರೆ ಕನ್ನಡ ಭಾಷೆಯಂತೆ ಭಾರತೀಯ ಭಾಷೆಗಳೂ ಅವಸಾನದ ಅಂಚಿಗೆ ಬರುತ್ತದೆ.

**2. ಪೋಷಕರ ನಿಲುವು:**

ಇವತ್ತು ತಂದೆ ತಾಯಿಗಳಿಗೆ ಮಕ್ಕಳು ಮೇಧಾವಿಗಳೂ ಪ್ರಜ್ಞಾವಂತರೂ ಆಗದಿದ್ದರೂ ಪರವಾಗಿಲ್ಲ. ಅವರಿಗೆ ಈ ಕಂಟೋನ್ಮೆಂಟ್ ಸಂಸ್ಕೃತಿ ದೊರಕಿದರೆ ಸಾಕು ಎನ್ನಿಸಿದೆ. ಇದಕ್ಕೆ ಕಾರಣ ಇಷ್ಟೇ. ಇವತ್ತು ಮೇಧಾವಿಗಳೆಂದು ಹೊಗಳಿಸಿಕೊಳ್ಳುತ್ತಿರುವವರೂ ದೊಡ್ಡ ದೊಡ್ಡ ಅಧಿಕಾರ ಸ್ಥಾನಗಳಲ್ಲಿ ಕುಳಿತಿರುವವರೂ ಆ ಸ್ಥಾನಗಳಿಗೆ ಹೋಗಿರುವುದು ತಮ್ಮ ಪ್ರತಿಭೆ ಪಾಂಡಿತ್ಯಗಳಿಗಿಂತ ಮಿಗಿಲಾಗಿ ತಮ್ಮ ಬೂಟು ಟೈ ವೇಷಗಳಿಂದ, ಫೋಕರ್ ಚಾಕುಗಳಲ್ಲಿ ಊಟ ಕಲಿತಿರುವುದರಿಂದ, ನಿರರ್ಗಳ ಇಂಗ್ಲೀಷ್ ಸಂಭಾಷಣೆ ಮಾಡುವುದರಿಂದ ಎನ್ನುವುದು ಜನಗಳಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ನಮ್ಮ ಸರ್ಕಾರದ ಅತ್ಯುನ್ನತ ಹಂತಗಳಲ್ಲಿ ಇರುವವರನ್ನು ಪರೀಕ್ಷಿಸಿ ನೋಡಿ. ಮುಕ್ಕಾಲು ಜನರ ಬಂಡವಾಳ ಕೇವಲ ಈ ಕಂಟೋನ್ಮೆಂಟ್ ಸಂಸ್ಕೃತಿ ಮಾತ್ರವಾಗಿರುತ್ತದೆ. ನಮ್ಮ ದೇಶಕ್ಕೆ ಇವತ್ತು ಬೇಕಾಗಿರುವುದು ಪ್ರತಿಭೆಯೂ ಅಲ್ಲ ಪಾಂಡಿತ್ಯವೂ ಅಲ್ಲ. ಈ ಕಂಟೋನ್ಮೆಂಟ್ ಸಂಸ್ಕೃತಿ ಒಂದಿದ್ದರೆ ಸಾಕು ಹಣ ಮತ್ತು ಅಧಿಕಾರ ಸಿಗುತ್ತದೆ.[11] ರಾಜ್ಯದಲ್ಲಿ ನಗರವಾಸಿ ಮಕ್ಕಳಿಗೆ ಸಿಗುವ ಶಿಕ್ಷಣದ ನಡುವೆ ಹಳ್ಳಿಗಳಲ್ಲಿ ಇರುವ ಬಡ ಮಧ್ಯಮ ವರ್ಗದ ಮಕ್ಕಳು, ದಲಿತ, ಹಿಂದುಳಿದ ಮಕ್ಕಳ ಕಥೆ ಹೇಗೆ? ಇದರಿಂದ ವ್ಯವಸ್ಥೆಯಲ್ಲಿ ಅಂತರ ನಿರ್ಮಾಣವಾಗುತ್ತಿದೆ. ಒಂದೊಂದು ವರ್ಗಕ್ಕೆ ಒಂದೊಂದು ರೀತಿಯ ಶಿಕ್ಷಣ ನೀಡುವ ಕ್ರಮ ಈಗ ರೂಪುಗೊಳ್ಳುತ್ತಿದೆ. ತಂದೆ ತಾಯಿಗಳಿಗೂ ತಮ್ಮ ಮಕ್ಕಳುನ್ನು ಕಂಟೋನ್ಮೆಂಟ್ ಸಂಸ್ಕೃತಿಯ ಪ್ರತಿನಿಧಿಯಾಗಿಸುವ ಹಂಬಲ. ಇದರಲ್ಲಿ ಇವರ ತಪ್ಪೇನೂ ಇಲ್ಲ. ನಾವು ಭಾವುಕವಾಗಿ ಕನ್ನಡ ಭಾಷೆಯ ಕಲಿಕೆ ಕುರಿತು ಯೋಚಿಸಿದರೆ ಏನೂ ಪ್ರಯೋಜನವಿಲ್ಲ. ಯಾಕೆಂದರೆ ಕನ್ನಡ ಕಲಿಕೆಯು ಯಾವ ಸ್ತರದ ಜನರೂ ಒಪ್ಪುವ ಸ್ಥಿತಿಯಲ್ಲಿ ಇಲ್ಲದಾಗಿದೆ. ಭಾಷಣ ಮಾಡುವ ಮೇಧಾವಿಗಳು, ಜನರನ್ನು ದಾರಿ ತಪ್ಪಿಸುತ್ತ ತಮ್ಮ ಮಕ್ಕಳನ್ನು ಖಾಸಗಿ ಇಂಗ್ಲೀಷ್ ಶಾಲೆಗೆ ಕಳುಹಿಸುತ್ತಾರೆ. ಯಾವುದೋ ಆದರ್ಶದ ಮಾತಿರಲಿ, ಭವಿಷ್ಯವೇ ಇಲ್ಲದ ಸ್ಥಿತಿಯನ್ನು, ಬದುಕಲು ಸಂಪಾದನೆಗೆ ದಾರಿಯಾಗದ ಪದವಿಯನ್ನು, ಮೇಲ್ ಸ್ತರಕ್ಕೆ ಹೋಗಲು ಸಾಧ್ಯವಾಗದ ಭಾಷೆಯ ಮಾಧ್ಯಮಕ್ಕೆ ಯಾರು ಪ್ರೋತ್ಸಾಹ ನೀಡುತ್ತಾರೆ? ಹೀಗೆ ಕಲಿಕೆ ಹಂತದಿಂದಲೇ ಜನರ ಬದುಕಿನ ಪ್ರಶ್ನೆಯಾಗಿ ಇಂಗ್ಲೀಷ್ ಬೆಳೆದು ನಿಂತಿದೆ. ಕನ್ನಡ ಭಾಷೆಯ ಸ್ಥಾನವನ್ನು ಆಕ್ರಮಿಸುತ್ತ ಜನರ ಮನೋಪಟಲದಲ್ಲಿ ತನ್ನ ಸ್ಥಾನವನ್ನು ಭದ್ರ ಮಾಡಿಕೊಳ್ಳುತ್ತ ಕನ್ನಡ ಭಾಷೆಯನ್ನು ಮೂಲೆಗುಂಪು ಮಾಡಿದೆ. ನಾಡಿನ ನಗರಗಳು, ಹಳ್ಳಿಗಳು ಮತ್ತು ಜನರುಗಳೆಲ್ಲ ಸ್ಮಾರ್ಟ್ ಆಗುವ ದೆಸೆಯಲ್ಲಿ ಕನ್ನಡ ಕಲಿಯುವವರು ಯಾರು?

ಗುಲಾಮ ಮನೋಭಾವವು ಜನರಲ್ಲಿ ಮನೆಮಾಡಿದೆ. ತಮ್ಮ ಮಕ್ಕಳು ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಹೇಗಾದರೂ ಮಾಡಿ ಕೆಲಸ ಪಡೆಯಬೇಕು, ಇಲ್ಲ ಶಿಕ್ಷಣ ಮುಗಿಸುವ ಮುಂಚೆ ಉದ್ಯೋಗದ ಸಂತೆಯಲ್ಲಿ ಪ್ರಾಣಿಗಳಂತೆ ಮಾರಾಟವಾಗಬೇಕು. ಶಿಕ್ಷಣ ಮುಗಿಸಿ ವಿದೇಶಗಳಲ್ಲಿ ಹೇಗಾದರೂ ಜಾಗ ಮಾಡಿಕೊಂಡು ನೆಲೆ ಪಡೆಯಬೇಕು. ಇಲ್ಲ ವಿದೇಶದಲ್ಲಿ ಕೆಲಸ ಮಾಡುವವನಿಗೆ ಮದುವೆ ಮಾಡಿ ಹೆತ್ತ ಮಕ್ಕಳನ್ನು ಹೊರ ದೇಶಕ್ಕೆ ಸಾಗಿಸುವ ಧ್ಯೇಯವನ್ನು ಪೋಷಕರು ಹೊಂದಿದ್ದಾರೆ. ಯಾರಿಗೂ ಅವರ ಮಕ್ಕಳು ಇಲ್ಲಿ ಬದುಕಿ ಬಾಳುವ ಆಸೆ ಇಲ್ಲ. ಬದುಕಲು ಯೋಗ್ಯತೆ ಅಥವಾ ಬದುಕು ಇರುವುದಾದರೆ ಅದು ವಿದೇಶದಲ್ಲೇ. ಇಲ್ಲಿ ಅಲ್ಲ ಎಂಬುದೇ ಪೋಷಕರ ಧೋರಣೆಯಾಗಿದೆ. ಮಕ್ಕಳನ್ನು ಒಂದು ರೀತಿ 'ಎಕ್ಸ್ಪೋರ್ಟರ್ ಮೆಟೀರಿಯಲ್'ಯಾಗುತ್ತ ಶಾಲೆಗಳು ಉತ್ಪಾದನೆಯ ಕೈಗಾರಿಕೆಯಾಗುತ್ತಿವೆ.

**3. ವಾಸ್ತವದ ಗೊಂದಲಗಳೋ ಅಥವಾ ಸಮಸ್ಯೆಗಳೋ?**

ವಿಶ್ವವಿದ್ಯಾನಿಲಯಗಳು ಅಣೆಕಟ್ಟುಗಳಂತಲ್ಲ; ಕಾಗದದ, ಉಕ್ಕಿನ ಅಥವಾ ಹೆಂಚಿನ ಕಾರ್ಖಾನೆಗಳಂತಲ್ಲ. ಅವುಗಳಿಂದ ಸಿದ್ಧವಾಗುವ ತಯಾರಿಕೆಗಳನ್ನು ಕಾರ್ಖಾನೆಯ ಸಿದ್ಧ ಪದಾರ್ಥಗಳನ್ನು ಪರೀಕ್ಷಿಸುವಂತೆ ಪರಿಶೀಲಿಸಿ ಬೆಲೆಕಟ್ಟುವಂತಿಲ್ಲ. ಅವುಗಳಿಂದ ಹೊರಬೀಳುವ ವಸ್ತುಗಳು ಸಜೀವವಾದವು; ಸಚೇತನವಾದವು. ಒಂದೊಂದು ತನ್ನ ವಿಶಿಷ್ಟತೆಯಿಂದ ನಿರುಪಮವಾದುದು.[12] ಕುವೆಂಪು ಕಾಲದ ಆಶಯದ ಮಾತು ನಮ್ಮ ಕಾಲಕ್ಕೆ ಬದಲಾಗಿರುವುದು ನಮ್ಮ ಕಾಲದ ಹೀನ ಮನೋವೃತ್ತಿಯನ್ನು ತೋರುತ್ತದೆ. ಕಾಲದ ನೆಲೆಯಲ್ಲಿ ಶಿಕ್ಷಣವನ್ನು ನೋಡುವ ಪರಿ ಕೂಡ ಬದಲಾಗಿದೆ. ಇಂದು ವಿದ್ಯಾರ್ಥಿಗಳು ಶಾಲೆಗೆ ಸೇರುವಾಗ ಕಚ್ಚಾ ಪದಾರ್ಥಗಳಾಗಿದ್ದಾರೆ. ಶಿಕ್ಷಣ ಮುಗಿಸಿ ಹೊರ ಬರುವ ಕಾಲಕ್ಕೆ ಸಿದ್ಧಪದಾರ್ಥಗಳಾಗುತಿದ್ದಾರೆ ಬೇಡಿಕೆಯ ಮಾರುಕಟ್ಟೆಯಲ್ಲಿ.

'ಎಕ್ಸ್ಪೋರ್ಟ್ ಮೆಟೀರಿಯಲ್' ಆಗಿರುವ ಆಗತ್ಯವಾದರೂ ಏನು? ಎಲ್ಲರೂ ಇಂಜಿನಿಯರ್, ಡಾಕ್ಟರ್ ಆಗಿ ಏನು ಮಾಡುವುದಿದೆ? ಎಲ್ಲಿ ಹೋಗುವುದಿದೆ? ಹೊಸ ಆವಿಷ್ಕಾರಗಳು ದೇಶದಲ್ಲಿ ಯಾವ ಪ್ರಮಾಣದಲ್ಲಿ ನಡೆಯುತ್ತಿದೆ? ಹೊಸದಾಗಿ ದೇಶೀಯ ಉದ್ದಿಮೆಗಳು ಎಷ್ಟು ಪ್ರಾರಂಭವಾಗಿದೆ? ನಮ್ಮ ಮಕ್ಕಳನ್ನು ಉತ್ಪಾದನಾ ವಸ್ತುವಾಗಿಸುವ ಬದಲು ಉತ್ಪಾದಕ ಉದ್ದಿಮೆದಾರನಾಗಿ ಮಾಡಲು ಸಾಧ್ಯವಿಲ್ಲವೇ? ಸರ್ಕಾರಕ್ಕೆ 'ಎಕ್ಸ್ಪೋಟರ್ ಮೆಟೀರಿಯಲ್' ಆದ ವಿದ್ಯಾವಂತರಿಂದ ಏನು ಲಾಭ? ನಮ್ಮ ಯೋಜನೆಗಳು ಅಲ್ಪ ಆಯುಷ್ಯದವಾಗಿರುವುದರಿಂದ ಹೆಚ್ಚುಕಾಲ ಇದರೊಂದಿಗೆ ಬದುಕಲು ಸಾಧ್ಯವಿಲ್ಲವೇ? ಜನರನ್ನು ಸರಿ ದಾರಿಯಲ್ಲಿ ನಡೆಸಲು ಸಾಧ್ಯವಿಲ್ಲವೇ? ಕನ್ನಡ ಭಾಷೆ, ಇಂಗ್ಲೀಷ್ ಭಾಷೆಯಷ್ಟು ಪ್ರಬಲವಾದ ತಂತ್ರಜ್ಞಾನದ ಭಾಷೆಯಾಗಲು ಸಾಧ್ಯವಿಲ್ಲವೆ? ಸಾಧ್ಯವಿದ್ದರೆ ಹೇಗೆ ಮಾಡಬೇಕು? ಕನ್ನಡದ ಹಳೆಯ ಬೇರುಗಳನ್ನು ಭದ್ರ ಪಡಿಸಿಕೊಂಡು ಜಾಗತಿಕವಾಗಿ ಬೆಳೆಯುವುದು ಹೇಗೆ? ಈ ಬಗ್ಗೆ ಎಷ್ಟು ಯೋಚನೆಗಳನ್ನು ಸರ್ಕಾರ ಮಾಡಿದೆ? ತಕ್ಷಣದ ಲಾಭದ ಉದ್ದೇಶದಿಂದ ನಮ್ಮ ಇತಿಹಾಸವನ್ನು ನಾವು ಮಣ್ಣು ಪಾಲುಮಾಡುತ್ತಿರ ಬಹುದೆ? ಹೀಗೆ ಪ್ರಶ್ನೆಗನ್ನು ಬೆಳೆಸುತ್ತಲೇ ಹುಡುಕಾಟ ಮಾಡಬಹುದು. ಆದರೆ ಉತ್ತರ ಎಷ್ಟು ಜನಕ್ಕೆ ಬೇಕಿದೆ? ಈ ಉತ್ತರದಿಂದ ಯಾರಿಗೆ ಎಷ್ಟು ಲಾಭ ಇದೆ? ಭಾಷೆ ಸಂಸ್ಕೃತಿಯ ವಾಹಕ ಎಂದು ಎಷ್ಟು ಜನಕ್ಕೆ ಗೊತ್ತಿದೆ? ಇಂಗ್ಲೀಷ್ ಭಾಷೆ ಒಂದರಿಂದಲೇ 'ಕನ್ನಡ ಸಂಸ್ಕೃತಿ'ಯನ್ನು ಕಲಿಸಲು ಸಾಧ್ಯವೇ? ಕನ್ನಡ ಸಂಸ್ಕೃತಿ ಎಂದರೇನು? ಮನುಷ್ಯ ಸಂಬಂಧಗಳನ್ನು ಮೀರಿದ ಶಕ್ತಿ ಇಂಗ್ಲೀಷ್ ಭಾಷೆಗೆ ಇರುವುದೆ? ಇಂಗ್ಲೀಷ್ ಮಾಧ್ಯಮದಲ್ಲಿ ಓದಿದ ಎಲ್ಲರಿಗೂ ವಿದೇಶಕ್ಕೆ ಹೋಗಲು ಸಾಧ್ಯವಿದೆಯೇ? ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಎಲ್ಲ ಮಕ್ಕಳೂ ಭವಿಷ್ಯವನ್ನು ರೂಪಿಸಿಕೊಂಡಿರುವರೆ? ಯಾವ ಉದ್ಯೋಗ ಮಾಡುತ್ತಿದ್ದಾರೆ? ಎಷ್ಟು ವರ್ಷ ಒಂದು ಕಂಪೆನಿ ಅಥವ ಸಂಸ್ಥೆಯಲ್ಲಿ ಉದ್ಯೋಗ ಮಾಡುತ್ತಿದ್ದಾರೆ? ವ್ಯಕ್ತಿತ್ವ ಮತ್ತು ಬದ್ಧತೆ ಇರುವ ಮಕ್ಕಳನ್ನು ನಾವು ರೂಪಿಸುವುದು ಬೇಡವೇ? ಅಗತ್ಯವಾಗಿ ಬೇಡಿಕೆ ಇರುವ ಉದ್ದಿಮೆಗಳಿಗೆ 'ಎಕ್ಸ್ಪೋರ್ಟ್ ಮೆಟೀರಿಯಲ್' ಬೇಕಿದೆ ಅಷ್ಟೇ. ಅದೇ ಭವಿಷ್ಯ, ಅದೇ ಬದುಕು, ಅದೇ ಜೀವನ, ಅದೇ ಸಂಸ್ಕೃತಿ, ಎಲ್ಲವೂ 'ಎಕ್ಸ್ಪೋರ್ಟ್ ಮೆಟೀರಿಯಲ್'ನಲ್ಲಿದೆ.

ಇಂತಹ ಗೊಂದಲದ ಜನರು ಊರು ತುಂಬಾ ಸಿಗುತ್ತಾರೆ. ಇದು ಸಂಕ್ರಾಮಿಕ ರೋಗದಂತೆ ನಗರ ಹಳ್ಳಿ ಎಂಬ ಭೇದವನ್ನು ಕಾಣಲು ಸಾಧ್ಯವಿಲ್ಲ. ಇದನ್ನು ಕುರಿತು ಚರ್ಚೆ ಅಥವಾ ಪ್ರಶ್ನೆ ಮಾಡಿದರೆ ನಾವು ಅಭಿವೃದ್ಧಿ ವಿರೋಧಿಗಳು ಎಂಬ ಹಣೆಪಟ್ಟಿ ಕಟ್ಟುವರು. ಆಡಳಿತ ಮತ್ತು ಆರ್ಥಿಕ ವಹಿವಾಟು ಇತ್ಯಾದಿಗಳ ಜನ ಬಳಕೆಯನ್ನು ತಪ್ಪಿಸಿಬಿಟ್ಟರೆ ಸಾಕು,

ಕನ್ನಡವನ್ನು ಕೊಲ್ಲುವುದಕ್ಕೆ ಬೇರೆ ಸಮರ್ಥ ವಿಧಾನ ಬೇಕಿಲ್ಲ............ ಜನ ಬಳಸುವುದನ್ನು ನಿಲ್ಲಿಸುತ್ತಿದ್ದಂತೆಯೇ ಆ ಭಾಷೆಯ ಅವಸಾನ ಶುರುವಾಗುತ್ತದೆ. ಇದಕ್ಕೆ ಸಂಸ್ಕೃತದ ಜ್ವಲಂತ ಉದಾಹರಣೆ ನಮ್ಮ ಕಣ್ಣೆದುರೇ ಇದೆ.[13] ವ್ಯವಸ್ಥೆ ಹೇಗಾದರೂ ಇರಲಿ, ನಮ್ಮ ಮಕ್ಕಳು ಮಾತ್ರ ವಿದೇಶಕ್ಕೆ ಹೋಗಬೇಕು, ವಿದೇಶಗಳ ಊಳಿಗಕ್ಕಾಗಿ ನಮ್ಮ ಮಕ್ಕಳು ಸಿದ್ಧರಾಗಿದ್ದಾರೆ. ಅಲ್ಲಿಯ ವ್ಯವಸ್ಥೆ, ಗುಲಾಮಗಿರಿ, ಊಳಿಗವೋ, ಜೀತವೋ, ಸಹಿಸಿಕೊಂಡು ಹೆಮ್ಮೆ ಪಡಬೇಕು. ನಮ್ಮ ಮಗ ಅಥವಾ ಮಗಳು, ಅಳಿಯ ಅಥವಾ ತಮ್ಮ ವಿದೇಶದಲ್ಲಿ ಇರುವರು ಎಂದು ಹೇಳಿಕೊಳ್ಳುವ ಹೆಮ್ಮೆ ಅಷ್ಟೇ ಇವರಿಗೆ. ಎಷ್ಟೋ ಮನೆಗಳು ವೃದ್ಧಾಪ್ಯದ ಬೀಡಾಗುತ್ತಿದೆ. ಇದರ ಬಗ್ಗೆ ಎಚ್ಚರ ಕೂಡ ಇಲ್ಲ ನಮಗೆ.

ಮೇಲಿನ ಎಲ್ಲ ಪ್ರಶ್ನೆಗಳೂ ಗೊಂದಲಗಳಲ್ಲ. ಅವು ಸಮಸ್ಯೆಗಳು. ಸಮಸ್ಯೆ ಪರಿಹಾರವಾಗದೇ ಹೋದರೆ ವ್ಯವಸ್ಥೆ ವಿರೂಪವಾಗುತ್ತದೆ. ಇದರಿಂದ ಸಾಮಾಜಿಕ, ಕೌಟಂಬಿಕ ಸಮಸ್ಯೆ ಹೆಚ್ಚಾಗುತ್ತದೆ. ಮುಂದೊಂದು ದಿನ ನ್ಯಾಯಕ್ಕಾಗಿ ಹಗಲಿರುಳು ಹೋರಾಟ ಮಾಡಬೇಕಾಗುತ್ತದೆ. ಇಂದಿನ ತಪ್ಪು ನಿರ್ಧಾರಗಳಿಗೆ ಪರಿಹಾರವಾಗಿ. ಸಂಸ್ಕೃತಿ ಹೀನವಾದ ಸಮಾಜದಲ್ಲಿ ಸಮಸ್ಯೆಗಳಲ್ಲದೇ ಬೇರೆ ಏನಿದೆ?

**3. ಆಧುನಿಕತೆಗೆ ಕನ್ನಡವನ್ನು ಸಜ್ಜಾಗಿಸ ಬೇಕಾದ ನೆಲೆಗಳು**

ಕನ್ನಡ ಭಾಷೆಯ ಮೇಲೆ ಜನ ಹೊಂದಿರುವ ಕೀಳರಿಮೆ, ತಪ್ಪು ತಿಳುವಳಿಕೆ, ಕನ್ನಡ ಕುರಿತಾಗಿ ಸಮಾಜದಲ್ಲಿರುವ ಅಜ್ಞಾನವನ್ನು ತೊಲಗಿಸುವ ಕೆಲಸವಾಗಬೇಕು. ನಾವು ಕನ್ನಡ ಭಾಷೆ ಬಗ್ಗೆ ಮಾತಾಡುವಾಗೆಲ್ಲ ಭಾವನಾತ್ಮಕ ನೆಲೆಯಿಂದಲೇ ನೋಡುವುದು ತಪ್ಪು. ಕನ್ನಡದ ಪ್ರಾಮುಖ್ಯತೆಯನ್ನು ನಾನು ಆ ದೃಷ್ಟಿಯಿಂದ ಪ್ರತಿಪಾದಿಸುತ್ತಿಲ್ಲ. ಇವತ್ತಿಗೂ ವಿಚಾರ, ತಿಳುವಳಿಕೆ, ಜ್ಞಾನವನ್ನು ಅತ್ಯಂತ ಕ್ಷಿಪ್ರವಾಗಿ ತಿಳಿಸುವ ವಾಹಕ ನಮ್ಮ ಮಾತೃಭಾಷೆಯೇ ಆಗಿದೆ. ಯೂರೋಪಿಯನ್ನರ ನಕಲಿಯನ್ನೇ ನಾವು ಬೌದ್ಧಿಕತೆ ಎಂದು ಭ್ರಮಿಸಿರುವುದರಿಂದ ಇಂಗ್ಲೀಷ್ ಮಾಧ್ಯಮದ ಕಾನ್ವೆಂಟುಗಳಿಗೆ ಸಾವಿರಾರು ರೂಪಾಯಿ ಕ್ಯಾಪಿಟೇಶನ್ ಹಣ ಕೊಟ್ಟು ಮಕ್ಕಳನ್ನು ಸೇರಿಸಲು ಮುಗಿಬೀಳುತ್ತಿರುವುದು. ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಸೇರಿ ಟೈ ಕಟ್ಟಿಕೊಂಡು ಓಡಾಡುವ ಮಕ್ಕಳು ಸಹ ವಿಷಯ ಗ್ರಹಣಕ್ಕೆ ಈಗಲೂ ಕನ್ನಡವನ್ನೇ ಆಶ್ರಯಿಸಿದ್ದಾರೆ.[14] ಆ ಮಕ್ಕಳಿಗೆ ಕನ್ನಡ ಅನಿವಾರ್ಯವೂ ಆಗಿದೆ. ನಾವು ಕನ್ನಡವನ್ನು ಇಲ್ಲಿಂದ ಉಳಿಸುವ ಕೆಲಸ ಮಾಡಬೇಕಿದೆ.

ಶಿಕ್ಷಣದ ಜೊತೆಗೆ ಬದುಕಿನ ಭಾಗವಾಗಿ ಕನ್ನಡ ಉಳಿಸಬೇಕಾದಂಥ ನೆಲೆಯಲ್ಲಿ ದೂರಗಾಮಿಯಾದ ಯೋಜನೆಯನ್ನು ನಿರ್ಮಿಸಬೇಕಾಗಿದೆ. ಆಡಳಿತ ಮತ್ತು ಅರ್ಥ ವ್ಯವಸ್ಥೆಯಲ್ಲಿ ಕನ್ನಡವನ್ನು ಉಳಿಸಿಕೊಳ್ಳಲು ಮಾಡಬೇಕಾದ ಕೆಲಸಗಳನ್ನು ಮಾಡಬೇಕು. ಅಂತಹ ಕಾರ್ಯಕ್ಕೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಪ್ರೋತ್ಸಾಹ ನೀಡಬೇಕು. ಪ್ರೋತ್ಸಾಹ ಭಾಷೆಯನ್ನು ಬಳಸುವಂತಿರಬೇಕು. ಅಂತಹ ಮನೋಭಾವವನ್ನು ಎಲ್ಲರಲ್ಲೂ ಮೂಡಿಸಬೇಕು. ತಂತ್ರಜ್ಞಾನದ ಭಾಷೆಯಾಗಿ ಕನ್ನಡ ಬೆಳೆಯಬೇಕು. ಉದ್ದಿಮೆಯ ಭಾಷೆಯಾಗಿ ಕನ್ನಡ ಬೆಳೆಯ ಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಿ ಬಳಕೆಯಾಗಬೇಕು. ಗಣಕ ತಂತ್ರಜ್ಞಾನದಲ್ಲಿ ಕೇವಲ ಲಿಪಿ ಮುದ್ರಣಕ್ಕೆ ಮಾತ್ರ ಕನ್ನಡ ಸೀಮಿತವಾಗಿದೆ. ಅದು ಯಂತ್ರ ಮತ್ತು ತಂತ್ರ ಭಾಷೆಯಾಗಿ ರೂಪುಗೊಳ್ಳಬೇಕು. ಜಾಗತಿಕವಾಗಿ ಮುನ್ನಡೆಸುವ ದೆಸೆಯಲ್ಲಿ ಕನ್ನಡ ಭಾಷೆ ಕೂಡ ಜೊತೆಗಿರಬೇಕು. ಅನ್ಯ ಭಾಷೆಯ ಮೇಲೆ ದ್ವೇಷ, ಅಸೂಯೆ ಪಡುವ ಬದಲು ಆ ಮಟ್ಟಕ್ಕೆ ಕನ್ನಡವನ್ನು ನಾವು

ಬೆಳೆಸಲು ಸಿದ್ಧರಾಗಬೇಕು. ಲಿನೆಕ್ಸ್, ಮೈಕ್ರೋಸಾಫ್ಟ್, ಅಂತಹ ಆಪರೇಟಿಂಗ್ ಸಿಸ್ಟಂಗಳ ಯಂತ್ರಭಾಷೆಯನ್ನು ಕನ್ನಡದಲ್ಲಿ ನಿರ್ಮಾಣಮಾಡಬೇಕು. ಸಣ್ಣ ನೆಲೆಯಿಂದ ಹಿಡಿದು ದೊಡ್ಡ ಮಟ್ಟದ ಕೆಲಸ, ಕಾರ್ಯ, ಯೋಜನೆಗಳು ರಾಜ್ಯದ ಒಳಗೆ ಕನ್ನಡದಲ್ಲೇ ಆಗಬೇಕು, ಕನ್ನಡದಲ್ಲೇ ಆವಿಷ್ಕಾರವಾಗ ಬೇಕು.

ಆಡಳಿತದಲ್ಲಿ ಕನ್ನಡದ ಪರವಾಗಿ ಕೆಲಸಮಾಡುವ ಅಧಿಕಾರಿಗಳಿಗೆ ಹೆಚ್ಚಿನ ಆದ್ಯತೆ ಮತ್ತು ಅವಕಾಶ ಮಾಡಿಕೊಡಬೇಕು. ಕನ್ನಡ ಮಾತೃ ಭಾಷೆ ಅಲ್ಲದ ಅಧಿಕಾರಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ನಿರ್ದೇಶಕರಾಗಿ ನೇಮಕ ಮಾಡಬಾರದು. ಇಂತಹ ಅಧಿಕಾರಗಳನ್ನು ಕಾಪಾಡಲು ಹೋದರೆ ಕನ್ನಡದ ಗತಿ ಏನು? ಮೂಲತಃ ಅವರು ಕನ್ನಡಿಗರಲ್ಲ. ಅಭಿಮಾನಿಗಳಾಗಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲ. ಅವರ ತಾಯಿ ಭಾಷೆ ತೆಲುಗು, ತಮಿಳು, ಹಿಂದಿ. ಕನ್ನಡಿಗರಿಗೆ ಇರುವುದೊಂದೇ ತಾಯಿ ಭಾಷೆ. ಅದು ಕನ್ನಡ ಅದನ್ನು ಹಾಳು ಮಾಡಿದ್ರೆ ಏನ್ರೀ ಮಾಡೋದು. ಇದು ತರವಲ್ಲ. ಕನ್ನಡ ವಿರೋಧಿಗಳನ್ನು ಕನ್ನಡ ಉಳಿಸಿ ಎಂದು ಕೇಳಿದರೆ ಕನ್ನಡ ಉಳಿಯೋದ್ ಸಾಧ್ಯವಾ?[15]

ಕನ್ನಡ ಮಾಧ್ಯಮದಲ್ಲಿ ಶಾಲೆ ನಡೆಸುವುದಾಗಿ ಹೇಳಿಕೊಂಡು ಅನುಮತಿ ಪಡೆದು ಅನಧಿಕೃತವಾಗಿ ಇಂಗ್ಲೀಷ್ ಶಾಲೆ ನಡೆಸುವವರು ಒಂದು ಕಡೆ, ಕೇಂದ್ರದಿಂದ ಅನುಮತಿ ತಂದು ಹಿಂದಿ ಸಂಸ್ಕೃತ ಕಲಿಸುತ್ತ ಕನ್ನಡವನ್ನು ಕಲಿಸದೆ ಇರುವ ಕೇಂದ್ರಿಯ ವಿದ್ಯಾಲಯ, ನವೋದಯ, ಹಾಗೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಾಯತ್ತ ಶಾಲೆ ಕಾಲೇಜುಗಳು ಕನ್ನಡದ ಪಾಲಿನ ಬಲಿಪೀಠವಾಗಿದೆ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ರೀತಿಯ ಖಾಸಗಿ, ಸ್ವಾಯತ್ತ, ಶಾಲೆಗಳು, ಕಾಲೇಜುಗಳು ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಮತ್ತು ಕನ್ನಡ ತಂತ್ರಾಂಶವನ್ನು ಬಳಸುವಂತೆ ಕಠಿಣವಾದ ಆದೇಶವನ್ನು ಮಾಡಬೇಕು. ಇಲ್ಲದಿದ್ದರೆ ಅವರಿಗೆ ನೀಡಿರುವಂತಹ ಭೂಮಿ, ಅನುದಾನ ಮತ್ತಿತರ ಎಲ್ಲಾ ರೀತಿಯ ಸವಲತ್ತುಗಳನ್ನು ತನ್ನ ಸ್ವಾಧೀನಕ್ಕೆ ಹಿಂತೆಗೆದು ಕೊಳ್ಳುವಂತಹ ಕಾನೂನು ಮಾಡಬೇಕಾಗಿದೆ. ಕನ್ನಡ ಮಾಧ್ಯಮದ ಕಥೆ ಮುಗಿದು ಹೋಗಿದೆ. ಆದರೆ ಇಂದು ಭಾಷೆಯಾಗಿ ಕೂಡ ಕನ್ನಡವನ್ನು ಕಲಿಸದೆ ಇರುವ ಉದ್ದಟತನವನ್ನು ಕೆಲವು ಸಂಸ್ಥೆಗಳು ಮಾಡುತ್ತಿವೆ. ಅಂತಹ ಸಂಸ್ಥೆಗಳನ್ನು ಮುಚ್ಚಿಸಬೇಕಾಗಿದೆ. ಯಾವ ಮಟ್ಟದಲ್ಲಿ ಇಂಗ್ಲೀಷ್ ಅಗತ್ಯವಿದೆ. ಕನ್ನಡ ಕಲಿಕೆ ಎಷ್ಟು ಮುಖ್ಯವಿದೆ ಎಂಬುದನ್ನು ನಾವು ಮನಗಾಣದೆ ಹೋದರೆ ಕನ್ನಡ ಭಾಷೆ ಉಳಿಸುವುದು ಕೂಡ ಕಷ್ಟವಾಗುತ್ತದೆ.

ಇಂಗ್ಲೀಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳ್ಳದಿದ್ದರೆ, ಇಂಗ್ಲೀಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯ ರೋಗಿಯಂತಿರ ಬೇಕಾಗುತ್ತದೆ.[16]

ಕುವೆಂಪು ಮತ್ತು ತೇಜಸ್ವಿ ಅವರ ಚಿಂತನೆಗಳು ಪಾಶ್ಚಿಮಾತ್ಯ ಪ್ರಭಾವದಿಂದ ಮೊಳೆತ ವಿಚಾರವಲ್ಲ. ವಾಸ್ತವದ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಇವರ ವಿಚಾರಗಳು ಬಹಳ ಪ್ರಸ್ತುತವಾದ್ದು. ಮುಂದಿನ ನಡೆ ಮತ್ತು ಮಾಡಲೇ ಬೇಕಾದ ಕೆಲಸ ಬಗ್ಗೆ ಕೈಗನ್ನಡಿಯಾಗಿ, ದಿಕ್ಸೂಚಿಯಾಗಿ ಇವರ ವಿಚಾರಗಳು ದಾರಿದೀಪವಾಗಿದೆ. ಅನ್ಯವನ್ನು ಕಾಣುವ ಮತ್ತು ಸ್ವೀಕರಿಸುವ ಪರಿಯೊಂದಿಗೆ, ಅದಕ್ಕೆ ಸರಿಸಮವಾಗಿ ತನ್ನ ಅಸ್ತಿತ್ವನ್ನು ರೂಪಿಸುತ್ತ ಎದುರಾಗುವ

ಸಂದರ್ಭವಿದಾಗಿದೆ. ಭಾಷೆಯ ವಿಚಾರದಲ್ಲಿ ಪಕ್ಷಾಂತರ ಮಾಡಿ ಲಾಭ ಮಾಡಿಕೊಂಡವರ ನಡುವೆ, ಭಾಷೆಗಾಗಿ ಏನಾದರೂ ಸುಧಾರಿಸುವ ಮನೋವೃತ್ತಿಯ ತೇಜಸ್ವಿ, ಸ್ಫೂರ್ತಿ ನೆಲೆಯಲ್ಲಿ ಕುವೆಂಪು ಇಂದಿಗೆ ಅನಿವಾರ್ಯವಾದ ಶಕ್ತಿಯಾಗಿದ್ದಾರೆ.

ಕಾಲದ ಪರಂಪರೆಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಕನ್ನಡ ತನ್ನ ನೆಲೆಯನ್ನು ಉಳಿಸಿಕೊಂಡು ಇಲ್ಲಿಯ ತನಕ ಬಂದಿದೆ. ಅನೇಕ ನುಡಿ ಸಾಧಕರ, ಕಲಿಗಳ ಪರಿಶ್ರಮವನ್ನು ಅರಿತು ನಾವು ಮುಂದುವರಿಯ ಬೇಕಿದೆ. ತತ್ವಜ್ಞಾನಿ ಬರ್ಟ್ರಾಂಡ್ ರಸಲ್ ಹೇಳುವಂತೆ ಮನುಷ್ಯ ಚರಿತ್ರೆಯಿಂದ ಪಾಠ ಕಲಿಯುವುದಿಲ್ಲ ಎನ್ನುವುದೇ ಚರಿತ್ರೆಯಿಂದ ನಾವು ಕಲಿಯುವ ಪಾಠ. ನಾಳೆ ನಮ್ಮ ಭಾಷೆ, ನಮ್ಮ ಸಂಸ್ಕೃತಿ, ಕನ್ನಡತನವನ್ನು ಉಳಿಸಿಕೊಳ್ಳಬೇಕಾದರೆ ಇಂತಹ ಚಾರಿತ್ರಿಕ ಹಿನ್ನೋಟ ಬಹಳ ಮುಖ್ಯವಾದ್ದು. ಕನ್ನಡವನ್ನು ಕನ್ನಡಿಗರೇ ಕೈಹಿಡಿದು ಮುಂದುವರಿಸಿಕೊಂಡು ಹೋಗಬೇಕಾಗಿರುವುದು. ನಾವೇ ಈ ವಿಚಾರದಲ್ಲಿ ಜಾಗೃತರಾಗದಿದ್ದರೆ ನಮ್ಮ ಭಾಷೆಯು ಸಂಸ್ಕೃತ ಭಾಷೆಯಂತೆ ಅವಸಾನ ಹೊಂದುವ ಸಾಧ್ಯತೆ ಇದೆ. ಕುವೆಂಪು ಮತ್ತು ತೇಜಸ್ವಿ ಇಬ್ಬರೂ ಕನ್ನಡ ಭಾಷೆಯ ಕುರಿತು ಮಾಡಿರುವ ಚಿಂತನೆಗಳು, ಚರ್ಚೆಗಳನ್ನು ನೋಡಿದಾಗ ಕೆಲ ಪ್ರಮುಖವಾದ ಅಂಶಗಳು ನಮಗೆ ಮುಖ್ಯ ಹಾಗೂ ಪ್ರಸ್ತುತವೆನಿಸುತ್ತದೆ.

1. ಇಂಗ್ಲೀಷ್ ಭಾಷೆಯನ್ನು ಎಲ್ಲೂ ಕೂಡ ಸಂಪೂರ್ಣ ನಿರಾಕರಣೆ ಮಾಡುವುದಿಲ್ಲ. ಇಂಗ್ಲೀಷ್ ಭಾಷೆಯಾಗಿ ಕಲಿಸುವುದಕ್ಕೆ ಇವರ ಸಹಮತವಿದೆ; ಮಾಧ್ಯಮವಾಗಿ ಅಲ್ಲ.
2. ಅನ್ಯರಿಂದ, ಅನ್ಯ ಭಾಷಿಕರಿಂದ ಬರಬಹುದಾದ ಹೊಸ ಜ್ಞಾನ ವಿಚಾರಗಳನ್ನು ಬಹಳ ಮುಕ್ತವಾಗಿ ಸ್ವಾಗತಿಸುತ್ತಾರೆ. ಅದರೊಂದಿಗಿನ ದಾಸ್ಯವನ್ನು ಒಪ್ಪುವುದಿಲ್ಲ.
3. ನಾಡು ನುಡಿ ವಿಚಾರದಲ್ಲಿ ಬಹಳ ನಿಷ್ಠುರವಾದ ನಿಲುವು ಇವರದು. ಎಂದೂ ಕೂಡ, ಎಲ್ಲೂ ಕೂಡ ಯಾರ ಮುಲಾಜಿಗೂ ಇವರು ಒಳಗಾಗುವುದಿಲ್ಲ.
4. ಇಬ್ಬರ ಚಿಂತನೆಗಳ ಹೋರಾಟದ ದನಿ, ಬಂಡಾಯದ ದನಿ, ಪ್ರೇರಕ ಶಕ್ತಿ ಹಾಗೂ ಕನ್ನಡ ಭಾಷೆಯ ಉಳಿವಿಗಾಗಿ ಮಾಡಲೇ ಬೇಕಾದ ಕೆಲಸಕ್ಕೆ ಒಗ್ಗೂಡಿಸುವ ಬಲವಿದೆ. ಸಂದಿಗ್ಧತೆಗಳನ್ನು ಮೀರುವ ಶಕ್ತಿ ಮತ್ತು ಆಲೋಚನೆಗಳು ನಮಗೆ ಪ್ರೇರಕವಾದ್ದು.
5. ಕನ್ನಡದ ಸಾಹಿತ್ಯದಲ್ಲಿನ ಬಂಡಾಯದ ದನಿ ಇವರ ಸಾಹಿತ್ಯ ಸೇರಿದಂತೆ ಸಾಮಾಜಿಕ ಮತ್ತು ಭಾಷಿಕ ಚಿಂತನೆಯಲ್ಲಿ ಮುಂದುವರಿದಿರುವುದನ್ನು ಕಾಣಬಹುದು.

**ಕೊನೆ ಟಿಪ್ಪಣಿಗಳು**

1. ಕುವೆಂಪು, ಪ್ರವಾಸಿ ಕಂಡ ಇಂಡಿಯಾ, ಮುನ್ನಡಿ ಸಾಲು, ಕುವೆಂಪು ಸಮಗ್ರ ಗದ್ಯ ಸಂಪುಟ-2, ಪುಟ: 776
2. ಅದೇ, ಪುಟ: 794
3. ಕುವೆಂಪು, ಕನ್ನಡ ಚಳುವಳಿಗಳು ಜೀವಂತವಾಗಿರಲಿ, ಕುವೆಂಪು ಸಮಗ್ರ ಗದ್ಯ 2, ಪುಟ: 809.
4. ಅದೇ;
5. ಅದೇ, ಪುಟ: 794
6. ಕುವೆಂಪು, ಸಂದರ್ಶನ-9, ಕುವೆಂಪು ಸಮಗ್ರ ಗದ್ಯ ಸಂಪುಟ-2, ಪುಟ: 907

7. ತಾರಿಣಿ ಚಿದಾನಂದ, ಮಗಳು ಕಂಡ ಕುವೆಂಪು, 2009, ಪುಟ: 414
8. ಸಿ.ಪಿ.ಕೆ. ಕುವೆಂಪು ಸಾಹಿತ್ಯ ಸಂವಾದ, ಪುಟ: 03
9. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹೊಸ ವಿಚಾರಗಳು, ಪುಟ: 282
10. ಅದೇ, ಪುಟ: 294
11. ಕೆ.ಪಿ. ಪೂರ್ಣಚಂದ್ರ ತೇಜಸ್ವಿ., ಇಂಗ್ಲಿಷ್ ಮೀಡಿಯಂ ಕನ್ನಡಕ್ಕೆ ಕುತ್ತು?, ಹೊಸ ವಿಚಾರಗಳು, ಪುಟ286
12. ಕುವೆಂಪು, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಕುವೆಂಪು ಸಮಗ್ರ ಗದ್ಯ ಸಂಪುಟ 2, ಪುಟ:357
13. ಅದೇ, ಪುಟ: 308
14. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಸೂಪರ್ ಪವರ್ ಆಗಲು ಕನ್ನಡವೇ ಗತಿ, ಹೊಸ ವಿಚಾರಗಳು, ಪುಟ: 309
15. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕನ್ನಡ ದ್ರೋಹಿಗಳಿಗೆ 'ಮಸಿ'ಯಲ್ಲದೆ 'ಫೇರ್ ಅಂಡ್ ಲವ್ಲಿ' ಹಚ್ಚಬೇಕಾ?, ಹೊಸ ವಿಚಾರಗಳು, ಪುಟ: 333
16. ಕುವೆಂಪು, ಬಲಾತ್ಕಾರದ ಇಂಗ್ಲೀಷ್: ಪ್ರಚ್ಛನ್ನ ಭ್ರಷ್ಟಾಚಾರ, ಕುವೆಂಪು ಸಮಗ್ರ ಗದ್ಯ ಸಂಪುಟ, ಪುಟ: 355.